ಆ) ಹೌದು. ಆದರೆ, ಈ ಯೋಜನೆಯಡಿ ಸೌಲಭ್ಯಗಳು ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪದಿದ್ದ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದವು. ಈ ಪ್ರಕರಣಗಳಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ತನಿಖೆಗಾಗಿ ಸಿ.ಓ.ಡಿ. ಗೆ ವಹಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಸಾಮಾನ್ಯವಾಗಿ ಸಮರ್ಪಕವಾಗಿ ನಡೆಯುತ್ತಿದೆ. ಒಂದೆರಡು ಕಡೆ ಮಾತ್ರ ಅರಣ್ಯ ಪ್ರದೇಶಗಳಲ್ಲಿ ಅತಿ ಹೆಚ್ಚಿನ ದೂರದಲ್ಲಿರುವ ಆದಿವಾಸಿ ಜನಾಂಗದವರಿರುವ ಕುಗ್ರಾಮಗಳಲ್ಲಿ ಗ್ರಾಮ ಸಭೆಗಳು ನಡೆಯದೇ ಇರುವುದು ಇಂತಹ ಸಂದರ್ಭಗಳಲ್ಲಿ ಗಿರಿಜನ ಉಪಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರಕ್ಕೆ ಕಾರಣವಾಗಿರುತ್ತದೆ. ಇಂತಹ ದೂರ ಪ್ರದೇಶಗಳಲ್ಲಿ ಇರುವ ಆದಿವಾಸಿ ಜನಾಂಗದವರಿಗಾಗಿ ಅನುಷ್ಠಾನಗೊಳಿಸುವ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆಯ ಸಂಬಂಧದಲ್ಲಿ ಆಯಾ ಕ್ಷೇತ್ರದ ಶಾಸಕರು ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡುವ ವಿಷಯವನ್ನು ಪರಿಶೀಲಿಸಲಾಗುತ್ತಿದೆ.

ಎಸ್.ಸಿ /ಎಸ್.ಟಿ, ನಿಗಮದಿಂದ ಕೊರೆಯಿಸಿದ ಕೊಳವೆ ಬಾವಿ

1572 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ : ಪಂಗಡಗಳ ಜನಸಂಖ್ಯೆ ಎಷ್ಟು?

ಆ) ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ : ಪಂಗಡ ಇವರುಗಳಿಗೆ ಪರಿಶಿಷ್ಟ ಜಾತಿ : ಪಂಗಡ ಅಭಿವೃದ್ಧಿ ನಿಗಮದಿಂದ ಮಂಜೂರು ಮಾಡಿರುವ ಕೊಳವೆಬಾವಿಗಳನ್ನು ತೊಡಿಸಲು ಬಂದ ಅರ್ಜಿಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಇ) ಅವುಗಳಲ್ಲಿ ಆ ಪೈಕಿ ಎಷ್ಟು ಅರ್ಜಿದಾರರಿಗೆ ಕೊಳವೆಬಾವಿಗಳನ್ನು ಕಳೆದ3 ವರ್ಷಗಳಿಂದ ಕೊರೆಯಲಾಗಿದೆ.

ಈ) ಇನ್ನುಳಿದ ಕೊಳವೆಬಾವಿಗಳನ್ನು ಕೊರೆಯಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಒಟ್ಟು ಜನಸಂಖ್ಯೆ 7,23,600 ಗಳು.

ಪರಿಶಿಷ್ಟ ಜಾತಿ :	5,70,400
ಪರಿಶಿಷ್ಟ ವರ್ಗ :	1,53,000

ಆ) ಕಳೆದ ಮೂರು ವರ್ಷಗಳಿಂದ ಕೋಲಾರ ಜಿಲ್ಲೆಯಲ್ಲಿ835 ಅರ್ಜಿಗಳು ಬಂದಿರುತ್ತದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.

ಇ) 435 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಈ) ಇನ್ನುಳಿದ ಕೊಳವೆಬಾವಿಗಳನ್ನು ಕೊರೆಯಲು ಕ್ರಮಕೈಗೊಳ್ಳಲಾಗಿದೆ. ಅರ್ಹ ಫಲಾನುಭವಿಗಳಿಗೆ ಕೊಳವೆಬಾವಿ ಕೊರೆಸಲಾಗುವುದು.

ಗ್ರಾಮೀಣ ಯುವಕರಿಗೆ ವಿಶೇಷ ಕೈಗಾರಿಕಾ ತರಬೇತಿ

1573 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಗ್ರಾಮೀಣ ಯುವಕರಿಗೆ ವಿಶೇಷ ಕೈಗಾರಿಕಾ ತರಬೇತಿ ನೀಡಲು ಸರ್ಕಾರ ಬಯಸಿದೆಯೇ? ಬಯಸಿದ್ದಲ್ಲಿ ಎಷ್ಟು ಮಂದಿ ಯುವಕರಿಗೆ ನೀಡಲು ಉದ್ದೇಶಿಸಿದೆ? (ಜಿಲ್ಲಾವಾರು ವಿವರ ನೀಡುವುದು)*

ಆ) *ಯಾವ ಯಾವ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅಳವಡಿಸಲು ಉದ್ದೇಶಿಸಲಾಗಿದೆ?*

ಇ) *ಇದನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಇದರ ರೂಪುರೇಶೆಗಳೇನು?*

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹತ್ತಿ ಬೆಳೆಯುವ ಕುರಿತು

1575 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಹತ್ತಿ ಬೆಳೆಯುವ ಕ್ಷೇತ್ರವೆಷ್ಟು? ಈ ಕ್ಷೇತ್ರದಿಂದಾಗುವ ಹತ್ತಿ ಉತ್ಪಾದನೆ ಎಷ್ಟು?*

ಆ) *ರಾಜ್ಯದಲ್ಲಿ ನೂಲಿನ ಗಿರಣಿಗಳು ನುರಿಸುವ ಹತ್ತಿ ಎಷ್ಟು?*

ಇ) *ಎಲ್ಲಾ ಹತ್ತಿಯನ್ನು ರಾಜ್ಯದಲ್ಲಿಯೇ ನುರಿಸುವಂತಾಗಬೇಕಾದರೆ ಎಷ್ಟು ಗಿರಣಿಗಳು ಬೇಕಾಗುತ್ತವೆ ಹಾಗೂ ಈಗ ಹಾಲಿಯಿರುವ ಗಿರಣಿಗಳೆಷ್ಟು?*

ಈ) *ನೂಲಿನ ಗಿರಣಿಗಳಿಂದ ವಿವಿಧ ತೆರಿಗೆಗಳ ಮೂಲಕ ಸರ್ಕಾರದ ಖಜಾನೆಗೆ ಬಂದ ಹಣವೆಷ್ಟು?*

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು) :